ದಿನಗೂಲಿ ಕೆಲಸಗಾರರು ಹಾಗೂ ಹುಡುಗರಿಂದ ನಡೆಯುತ್ತಿರುವ ಸಣ್ಣಪ್ರಮಾಣದ ಕಳ್ಳ ತನಗಳನ್ನು (ಅಂದರೆ ರೂ.೬ ರಿಂದ ೧೫೦ರವರೆಗೆ) ಕರ್ನಾಟಕ ಪೋಲೀಸ್ ಕಾಯಿದೆಯ ಅನ್ವಯ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲಾಗಿದ್ದು ಇಂತಹ ಕಳ್ಳತನಗಳನ್ನು ನಿಯಂತ್ರಿಸಲಾಗಿದೆ.

ಈಗಿರುವ ವ್ಯವಸ್ಥೆಯನ್ನು ಆಗಿಂದಾಗ್ಗೆ ವಿಮರ್ಶಿಸಿ ಹೆಚ್ಚಿನ ಸಿಬ್ಬಂದಿ ಅವಶ್ಯಕತೆ ಕಂಡು ಬಂದರೆ ಸೂಕ್ತ ವ್ಯವಸ್ಥೆ ಮಾಡಲಾಗುವುದು.

೯) ಉಳ್ಳಾಲದಲ್ಲಿರುವ ಪ್ರವಾಸೋದ್ಯಮ ಕೇಂದ್ರವನ್ನು ಸ್ಥಾಪಿಸುವುದು.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡದ ಉಳ್ಳಾಲ ಸಮುದ್ರ ಕಿನಾರೆಯಲ್ಲಿದೆ. ಪ್ರಕೃತಿ ಸೌಂದರ್ಯದ ತವರೂರು ಉಳ್ಳಾಲ. ಒಂದು ಬದಿಯಿಂದ ಕಡಲಿನ ತೆರೆಗಳು ಸುಳಿ ಸುಳಿಯಾಗಿ ದಂಡೆಗೆ ಬಡಿಯುವ ದೃಶ್ಯ. ಮತ್ತೊಂದು ಬದಿಯಲ್ಲಿ ತೆಂಗಿನ ಮರಗಳ ಹಸಿರು ಸುಂದರ ರಮಣೀಯ ದೃಶ್ಯ. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಪೋರ್ಚುಗೀಸರ ವಿರುದ್ಧ ಹೋರಾಡಿದ ರಾಣಿ ಅಬ್ಬಕ್ಕ ರಾಣಿ ವಾಸವಾಗಿದ್ದ ತಾಣ ಇದು. ಅಲ್ಲದೆ ಭಾರತದ ಪ್ರಖ್ಯಾತವಾದ ಐದು ದರ್ಗಾ ಗಳಲ್ಲಿ ಒಂದಾದ ಸೈಯದ್ ಮದನಿ ಶರೀಪ್ ದರ್ಗಾ ಉಳ್ಳಾಲದಲ್ಲಿದೆ, ಹತ್ತಿರದಲ್ಲೇ ಪ್ರಖ್ಯಾತ ಸೋಮೇಶ್ವರ ದೇವಸ್ಥಾನ ಇದೆ, ಇಲ್ಲಿಗೆ ಪ್ರವಾಸಿಗಳು ಸದಾ ಬರುತ್ತಿದ್ದಾರೆ. ಆದರೆ ಇಲ್ಲೊಂದು ಪ್ರವಾಸೋದ್ಯಮ ತಾಣ ಇರ ವುದಿಲ್ಲ, ಹಿಂದೊಮ್ಮೆ ಉಳ್ಳಾಲದಲ್ಲಿ ಪ್ರವಾಸೋದ್ಯಮ ನೆಲೆಯನ್ನು ಸ್ಥಾಪಿಸಲು ಪ್ರಾತುಕತೆಯಾಗಿತ್ತು. ಆದರೆ ಅದು ಇನ್ನೂ ಯಾವುದೇ ರೂಪ ತಾಳಿಲ್ಲ. ಹಿಂದೊಮ್ಮೆ ಇದೇ ಸದನದಲ್ಲಿ ಉಳ್ಳಾಲದಲ್ಲಿ ಪ್ರವಾಸೋದ್ಯಮ ತಾಣ ಮಾಡಲಾಗುವುದೆಂದು ತಿಳಿಸಲಾಗತ್ತು. ಆದಕಾರಣ ಇಂತಹ ಸುಂದರ ಪ್ರವಾಸಿಗಳ ತಾಣವಾದ ಉಳ್ಳಾಲದಲ್ಲಿ ಒಂದು ಪ್ರವಾಸೋದ್ಯಮ ನೆಲೆಯನ್ನು ಸ್ಥಾಪಿಸಿ ಬರತಕ್ಕ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡುವಂತಾದ್ದು ಅತ್ಯಂತ ಪ್ರಾಮುಖ್ಯವಾಗಿರುತ್ತದೆ. ಈ ಕುರಿತು ಪ್ರವಾಸೋದ್ಯಮ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ನಾನು ಮಾನ್ಯ ಸದಸ್ಯರಿಗೆ ಉತ್ತರ ತರಿಸಿ ಕೊಡುತ್ತೇನೆ.

೧೦) ರೈತರಿಗೆ ಹಳ್ಳಿಗಳಲ್ಲಿ ಮೇವು ದಾಸ್ತಾನು. ಗೊಬ್ಬರದ ತಿಪ್ಪೆಗಳಿಗೆ ಗ್ರಾಮ ನೈರ್ಮಲ್ಯದ ದೃಷ್ಟಿಯಿಂದ ವ್ಯವಸ್ಥಿತ ಜಾಗವನ್ನು ಕಾದಿರಿಸುವುದು.

ಶ್ರೀ ಆರ್ ರಾಮಯ್ಯ.—ಮಾನ್ಯ ಅಧ್ಯಕ್ಷರೇ ಹಳ್ಳಿಗಾಡಿನಲ್ಲಿ ರೈತರು ತಾವು ಅವಲಂಬಿಸಿರುವ ದನಕರುಗಳನ್ನು ಪೋಷಿಸಲು ಅವರುಗಳ ಮನೆಯ ಬಳಿಯೇ ದನದ ಕೊಟ್ಟಿಗೆಯನ್ನು ನಿರ್ಮಾಣ ಮಾಡಿ ಕೊಂಡಿರುವರು ಆದರೆ ಇವುಗಳಿಗೆ ಬೇಕಾದ ಮೇವನ್ನು ದಾಸ್ತಾನು ಮಾಡಲು ಊರ ಬದಿಯಲ್ಲೇ ಕಣಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಹಾಗೆಯೇ ಅವುಗಳ ಗೊಬ್ಬರದ ತಿಪ್ಪೆಗಳನ್ನು ಸಹ ಹಾಕಿ ಕೊಂಡಿರುತ್ತಾರೆ. ಆದರೆ ಈ ಎರಡು ವ್ಯವಸ್ಥೆಗಳು ಅಗತ್ಯವಾಗಿದ್ದರೂ ಗ್ರಾಮ ನೈರ್ಮಲ್ಯದ ದೃಷ್ಟಿ ಯಿಂದ ಹಾಗೂ ಸಿವೇಶನಗಳನ್ನು ಕೊಡುವಾಗ ಉದ್ಭವಿಸುವ ಸಮಸ್ಯೆಗೆ ಪರಿಹಾರವಾಗಿ ಸರ್ಕಾರ ಏನಾದರೂ ಈ ಎರಡು ವ್ಯವಸ್ಥಿತ ಜಾಗವನ್ನು ಕಾದಿರಿಸಲು ವ್ಯವಸ್ಥೆ ಮಾಡುವುದೇ ?

ಶ್ರೀ ಎ ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಉತ್ತರ ತರಿಸಿ ಕೊಡುತ್ತೇನೆ.

೧) ಸಂಳ್ಯ ತಾಲ್ಲೂಕು ಕೇನ್ಯ ಗ್ರಾಮದ ಶ್ರೀಮತಿ ವಾಸಮ್ಮ ಎನ್ನುವವರಿಗೆ ಮಂಡಲ ಪಂಚಾಯಿತಿ ಸದಸ್ಯರೊಬ್ಬರು ಕಿರುಕಳ ಕೊಡುತ್ತಿರುವುದು.

ಶ್ರೀ ಕೆ ಕುಶಾಲ —ಮಾನ್ಯ ಅಧ್ಯಕ್ಷರೇ ಸುಳ್ಯ ತಾಲ್ಲೂಕಿನ ಕೇನ್ಯ ಗ್ರಾಮದಲ್ಲಿ ಶ್ರೀಮತಿ ವಾಸಮ್ಮ ಎಂಬ ಹಿಂದುಳಿದ ವರ್ಗದ ವಿಧವೆ ಎಸ್ ಸಿ.ಆರ್ ಸಿ.ಆರ್. ಕೆ.ಕೆ:೮೭:೮೮ರರಂತೆ ಸ. ನಂಬ್ರ ೧೧೨–೨೯ಲ್ಲಿ ೧–೦೬ ಎಕ್ರೆ ಜಮೀನು ರಿಕಾರ್ಡ್ ಆಗಿ ಸರಕಾರಕ್ಕೆ ಫೀಜು ಮಗೈರೆ ಪಾವತಿ ಮಾಡಿರುತ್ತಾರೆ. ಸದ್ರಿ ಜಮೀನು ಅಂದಿನಿ ದ ಈಗಲೂ ತಮ್ಮ ಸ್ವಾಧೀನ ಅನುಭವದಲ್ಲಿದು

ಕೃತಾವಳಿಗಳನ್ನು ಅನುಭವಿಸಿಕೊಂಡು ಜೀವಿಸಿಕೊಂಡು ಬರುತ್ತಿರುವರು. ಸದ್ರಿ ಗ್ರಾಮದಲ್ಲಿ ಸ.ನಂ. ೧೧೨-೨ರಲ್ಲಿ ಇನ್ನೂ ಅನೇಕ ಸರಕಾರಿಜಮೀನು ಇದ್ದು ಪರಿಶಿಷ್ಟ ಜಾತಿಯ ಹಲವು ಕುಟುಂಬಗಳಿಗೆ ದಕಾಸ್ತು ಮಂಜೂರಾಗಿ ಇವರೆಲ್ಲ ಪ್ರತ್ಯೇಕ ಜಮೀನಿಗೆ ಖಾತೆ ಆಗಿ ಸ್ಥಳದ ಪ್ಲಾಟು ವಗೈರೆ ಆಗಿ ಗ್ರಾಮ ರಿಕಾರ್ಡಿನಲ್ಲಿ ದಾಖಲಾಗಿ ಈ ಕುಟುಂಬಗಳು ವಾಸ್ತವಿಕವಾಗಿ ಅನುಭವಿಸಿಕೊಂಡು ಬರುತ್ತಿರುವರು. ಈ ಮಧ್ಯೆ ಸದ್ರಿ ಕೇನ್ಯ ಗ್ರಾಮದ ಮಂಡಲ ಪ್ರಧಾನರೊಬ್ಬರು ಈ ಬಡಪಾಯಿ ಹಿಂದುಳಿದ ಮಹಿಳೆಗೆ ಅನ್ಯಾಯ ಮಾಡುವ ಉದ್ದೇಶದಿಂದ ಕಿರುಕುಳ ಕೊಡುತ್ತಾ ಪರಿಶಿಷ್ಟ ಜಾತಿಯವರಿಗೆ ಮಂಜೂರಾದ ಜಮೀನು ಬೇರೆ ಬೇರೆ ಇದ್ದರೂ ಈ ಸ್ಥಳಕ್ಕೂ ಅವರ ಸ್ಥಳಕ್ಕೂ ಮೈಲಿ ಗಟ್ಟಲೆ ದೂರವಿದ್ದರೂ ಉದ್ದೇಶ ಪೂರ್ವಕ ಕಿರುಕುಳವನ್ನು ನೀಡುತ್ತಾ ಪರಿಶಿಷ್ಟ ಜಾತಿಯವರ ಹೆಸರಿನಲ್ಲಿ ಅವಿದ್ಯಾವಂತ ಪರಿಶಿಷ್ಟ ಜಾತಿಯ ಅಸಹಾಯಿನ ಕುಟುಂಬಗಳಿಗೆ ತಪ್ಪು ಮಾಹಿತಿ ತಿಳುವಳಿಕೆ ನೀಡಿ ಶ್ರೀಮತಿ ವಾಸಮ್ಮ ಎಂಬ ಹಿಂದುಳಿದ ಮಹಿಳೆಗೆ ಉಪಟಳ ನೀಡಲು ಪ್ರಚೋದನೆ ನೀಡುತ್ತಿರುವರು ಅಲ್ಲದೆ ಈ ಸ್ಥಳದ ಪ್ರಕರಣದ ಬಗ್ಗೆ ಕಂದಾಯ ಇಲಾಖೆಯ ಗ್ರಾಮಕರಣಿಕರು ಕಂದಾಯ ಪರಿವೀಕ್ಷಕರು ತಾಲ್ಲೂಕು ತಹಶೀಲ್ದಾರರು ಸ್ಥಳ ತನಿಖೆ ಸ್ಥಳದ ಆಳತೆಗೆ ವಗೈರೆಗೆ ಹೋಗಲು ಬಿಡದೆ ಗ್ರಾಮದಲ್ಲಿ ಪಟ್ಟಭದ್ರ ಹಿತಾಸಕ್ತಿಯಾಗಿಬಡ ಮಹಿಳೆಗೆ ಬೆದರಿಕೆ ಹಾಕುತ್ತಿರುವುದು ತಿಳಿದು ಬರುತ್ತದೆ ಸದ್ರಿ ಶ್ರೀಮತಿ ವಾಸಮ್ಮ ಎಂಬ ಹಿಂದುಳಿದ ವರ್ಗದ ಮಹಿಳೆಯನ್ನು ಕುಟುಂಬ ಸಮೇತ ಗ್ರಾಮದಿಂದ ಓಡಿಸುವ ಹೊಂಚನ್ನು ಕೂಡ ಹಾಕುತ್ತಿರುವರು. ಆದುದರಿಂದ ಸದ್ರಿ ಶ್ರೀಮತಿ ವಾಸಮ್ಮ ಎಂಬ ಬಡ ಮಹಿಳೆಗೆ ಮಂಜೂರಾದ ಸ್ಥಳವನ್ನು ಒದಗಿಸುವುದು ಮತ್ತು ಅನ್ಯಾಯವಾಗದಂತೆ ಆಕೆಯ ಕುಟುಂಬಕ್ಕೆ ರಕ್ಷಣೆಯನ್ನು ನೀಡುತ್ತಾ ಪರಿಶಿಷ್ಟ ಜಾತಿ ಪಂಗಡದವರನ್ನು ಎದುರು ಹಾಕಿ ಇಂತಹ ಪಟ್ಟಭದ್ರ ಹಿತಾಸಕ್ತಿಗಳನ್ನು ತಪ್ಪು ಮಾಹಿತಿ ಪ್ರಚೋದನೆ ನೀಡಿ ಪರಿಶಿಷ್ಟ ಜಾತಿ ಪಂಗಡದವರನ್ನು ತೋರಿಕೆಗೆ ಎತ್ತಿ ಕಟ್ಟಿ ಮಾಡುತ್ತಿರುವ ಅನ್ಯಾಯವನ್ನು ತಡೆಗಟ್ಟುವಂತೆ ಕೂಡ ಸರಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ಸಚಿವರು).—ಮಾನ್ಯ ಅಧ್ಯಕ್ಷರೇ ಕೇನ್ಯ ಗ್ರಾಮದಲ್ಲಿ ವಾಸವಾಗಿರುವ ಶ್ರೀಮತಿ ವಾಸವ್ಮ ಎಂಬ ಹಿಂದುಳಿದ ವರ್ಗದ ಗೌಡ ಜಾತಿಗೆ ಸೇರಿದವಳು. ಸರ್ವೆ ನಂಬರು ೧೧೨:೨ರಲ್ಲಿ ಒಂದು ಎಕರೆ ಆರು ಸೆಂಟ್ಸ್ ಜಮೀನನ್ನು ಅನಧಿಕೃತವಾಗಿ ಅನುಭವಿಸಿಕೊಂಡು ಬರುತ್ತಿದ್ದು ಸರ್ಕಾರಿ ತಕರಾರು ತಟ್ಟಿದಂದನೆ ೧೬೭-೪೦ ಪೈಸೆಗಳನ್ನು ದಿನಾಂಕ ೭-೯-೮೭ರಂದು ಜಮಾ ಮಾಡಿರುತ್ತಾರೆ. ಸದರಿ ಸರ್ವೆ ನಂಬರಿನಲ್ಲಿ ಒಟ್ಟು ನಾಲ್ಕು ಜನರಿಗೆ ಜಮೀನು ಮಂಜೂರು ಆಗಿದ್ದು ಅವರ ಪೈಕಿ ಮೂರು ಜನರು ಜಮೀನನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ. ಆದರಲ್ಲಿ ಮತ್ತೊಬ್ಬ ಮಂಜೂರಿದಾರರಾದ ಶ್ರೀ ಮೋಡಿ ಮೇಲಾರ ಅವರು ಮೃತರಾಗಿದ್ದಾರೆಂದು ಅವರ ಹೆಂಡತಿ ಶ್ರೀಮತಿ ಕುಯಿ ಹೆಂಗಸು ದಿನಾಂಕ ೧೪-೭-೮೭ರಲ್ಲಿ ಒಂದು ಅರ್ಜಿಸಲ್ಲಿಸಿ ಜಮೀನು ಮಂಜೂರಿದಾರರಾದ ಶ್ರೀ ಮೋಡಿ ಮೇಲಾರರವರ ಪತ್ನಿ ನಾನೆಂದುತನ್ನ ಗಂಡನಿಗೆ ಮಂಜೂರಿಯಾದ ಜಮೀನಿನಲ್ಲಿ ಶ್ರೀಮತಿ ವಾಸವ್ಮ ಎನ್ನುವವರು ಅತಿಕ್ರಮಣ ಮಾಡಿದ್ದಾರೆಂದು ತಕರಾರು ಸಲ್ಲಿಸಿದ್ದಾರೆ. ಈ ಬಗ್ಗೆ ಸರ್ವೆ ದುರಸ್ತಿ ಮಾಡಿ ಗಡಿ ಗುರುತನ್ನು ಕೋರಿಸಿ ಕಳುಹಿಸಿಕೊಡುವಂತೆ ಭೂಮಾಪನ ಇಲಾಖೆಗೆ ಸೂಚನೆ ನೀಡಲಾಗಿದೆ. ಈ ವಿಷಯದಲ್ಲಿ ಮಂಡಲ ಪಂಚಾಯಿತಿಯ ಪ್ರಧಾನರು ಸದರಿ ಹಿಂದುಳಿದ ಮಹಿಳೆಗೆ ಕಿರುಕುಳ ಕೊಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಕುಯಿ ಹೆಂಗಸು ಇವರ ಅರ್ಜಿ ಬಗ್ಗೆ ಪಜಸನಾಡ ಕಚೇರಿಯ ಉಪತಹಶೀಲ್ದಾರರವರು ದಿನಾಂಕ ೧೬-೧೨-೮೭ರಂದು ಸ್ಥಳ ತನಿಖೆ ಮಾಡಿರುತ್ತಾರೆ. ಮತ್ತು ಕಂದಾಯ ಇಲಾಖೆಯ ಯಾವುದೇ ಅಧಿಕಾರಿಗಳು ಸ್ಥಳ ತನಿಖೆ ಮಾಡುವಾಗ ಯಾರಿಂದಲೂ ಅಡ್ಡಿ ಆತಂಕಗಳು ಬಂದಿರುವುದಿಲ್ಲ. ಈಗ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಹಿಂದುಳಿದ ವರ್ಗಕ್ಕೆ ಸೇರಿದ ಮಹಿಳೆಗೆ ಎಲ್ಲಾ ರೀತಿಯಲ್ಲೂ ರಕ್ಷಣೆ ನೀಡಲಾಗಿದೆ. ಅಲ್ಲದೆ ಸದನದ ಮುಂದೆ ಇರುವ ತಿದ್ದುಪಡಿ ಮಸೂದೆ ಪಾಸಾದ ನಂತರ ಸದರಿ ಪ್ರಕರಣವನ್ನು ಪರಿಶೀಲನೆ ಮಾಡಿ ಈ ಪ್ರಕರಣ ಮಸೂದೆಯ ಚೌಕಟ್ಟಿನಲ್ಲಿದ್ದು ಅದಕ್ಕೆ ಅರ್ಹತೆ ಪಡೆದಿದ್ದರೆ ಅತಿಕ್ರಮಣವನ್ನು ಸಕ್ರಮಗೊಳಿಸಲು ಕ್ರಮ ಕೈಗೆದುಕೊಳ್ಳಲಾಗುವುದು.